# ಪದ್ಯ ವಿಭಾಗ

# 1. ಹಡೆದವ್ವ

– ಜನಪದರು

(ಜನಸಾಮಾನ್ಯರು ರಚಿಸಿದ ಜನಪದ ಸಾಹಿತ್ಯ ವಿಪುಲವೂ ವೈವಿಧ್ಯಪೂರ್ಣವೂ ಆದೆ. ಜನಪದರು ತಮ್ಮ ಬದುಕಿನ ಅನುಭವಗಳಿಗೆ ಬಣ್ಣ ತುಂಬಿದ್ದು ಆಕಾರ ನೀಡಿದ್ದು ಈ ಸಾಹಿತ್ಯದ ಮೂಲಕ. ಕನ್ನಡ ಸಾಹಿತ್ಯದಲ್ಲಿ ಜನಪದ ಸಾಹಿತ್ಯಕ್ಕೆ ವಿಶಿಷ್ಟ ಸ್ಥಾನವಿದೆ. ಪಾಮರ ಸಾಹಿತ್ಯವೆನಿಸಿದ ಇದರ ಸೃಷ್ಟಿಕಾರ್ಯ ಪುರುಷ ಹಾಗೂ ಮಹಿಳೆ ಇಬ್ಬರಿಂದಲೂ ನಡೆದಿದೆ. ಜನಪದ ಸಾಹಿತ್ಯದಲ್ಲಿ ತ್ರಿಪದಿಯೇ ಪ್ರಮುಖವಾದುದಾಗಿರುತ್ತದೆ. ಬಿಡಿರಚನೆಗಳಾದ ಈ ತ್ರಿಪದಿಯಲ್ಲಿ ಜನಪದರು ತಮ್ಮ ಬದುಕಿನ ಸರಸ-ವಿರಸ, ಸುಖ-ದುಃಖ, ನೊವು-ನಲಿವು, ಪ್ರೀತಿ-ವಾತ್ಸಲ್ಯ, ಆಸರಿಕೆ-ಬೇಸರಿಕೆ ಮೊದಲಾದ ಅನುಭವಗಳನ್ನು ಪ್ರಕಟಪಡಿಸಿದ್ದಾರೆ).

ಕೂಸು ಇದ್ದ ಮನಿಗೆ ಬೀಸಣಿಕೆ ಯಾತಕ ।
ಕೂಸು ಕಂದಯ್ಯ ಒಳಹೊರಗ । ಆಡಿದರ ।
ಬೀಸಣಿಕೆ ಗಾಳಿ ಸುಳಿದಾವ ।।1।।

ತಂದೀಯ ನೆನೆದರ ತಂಗಳ ಬಿಸಿಯಾಯ್ತು ।
ಗಂಗಾದೇವಿ ನನ್ನ ಹಡೆದವ್ವ । ನೆನೆದರ ।
ಮಾಸೀದ ತಲೆಯು ಮಡಿಯಾಯ್ತು ।।2।।

ಹೆಣ್ಣಿದ್ದ ಮನೆಗೆ ಕನ್ನಡಿ ಯಾತಕ್ಕ ।
ಹೆಣ್ಣು ಸಣ್ಣವಳು ಒಳಗಿರಲು । ನನ ಮಗಳು ।
ಕನ್ನಡಿಯಂಗ ಹೊಳೆಯುವಳು ।।3।।

ಬಡವೆಯ ಮಕ್ಕಳು ನಡೆದರೆ ಸಂತೋಷ ।
ಹುಡಿಯಾಡಿ ಮನೆಗೆ ಬರುವಾಗ । ತಾಯಿಗೆ ।
ಬಡತನದ ಜಾನ ಮರೆಯಿತು ।।4।।

ಜನಕರಾಯನ ಮಗಳು ಬನಕ ತೊಟ್ಟಿಲ ಕಟ್ಟಿ ।
ಲವಕುಶರನ್ನು ತೂಗ್ಯಾಳೊ । ಸೀತಾದೇವಿ ।
ನಗುತ ವನವಾಸ ಕಳದಾಳ ।।5।।

ತಾಯವ್ವನ ಬೈಬ್ಯಾಡ ತಿಳಿಗೇಡಿ ನನ ತಮ್ಮ ।
ಬಾಳ ದಿನದಾಕಿ ಹಡೆದವ್ವಗ । ಬೈದರ ।
ಬಾಳ ಮರುಗ್ಯಾಳ ಮನದಾಗ ।।6।।



**ಶಬ್ದಗಳ ಅರ್ಥ:**

ಬೀಸಣಿಕೆ = ಗಾಳಿ ಹಾಕಿಕೊಳ್ಳುವ ಸಾಧನ; ಮಾಸಿದ = ಹೊಲಸಾದ; ಹುಡಿಯಾಡು = ದೂಳಿನಲ್ಲಿ ಆಡು; ಮರುಗು = ಕಳವಳಗೊಳ್ಳು

## ಅಭ್ಯಾಸ

**ಪಠ್ಯಾಧಾರಿತ ಪದ್ಯವನ್ನು ಓದಿಕೊಂಡು ಕೊಟ್ಟ ಕೃತಿಗಳನ್ನು ಮಾಡಿರಿ.**

**ಕೃತಿ 1) ಕೆಳಗೆ ಕೊಟ್ಟ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

1) ಕೂಸು ಇದ್ದ ಮನಿಗೆ ಯಾವುದು ಬೇಡ?

2) ಹಡೆದವ್ವನನ್ನು ಯಾವ ನದಿಗೆ ಹೋಲಿಸಲಾಗಿದೆ?

3) ಸೀತಾದೇವಿಯ ಮಕ್ಕಳು ಯಾರು?

4) ತಾಯವ್ವನು ಮರುಗಬಾರದೆಂದು ತಮ್ಮನು ಹೇಗೆ ನಡೆದುಕೊಳ್ಳಬೇಕು?

**ಕೃತಿ 2) ಪದ್ಯದಲ್ಲಿ ಬಂದಿರುವ ಗ್ರಾಮ್ಯ ಶಬ್ದಗಳನ್ನು ಹುಡುಕಿ ಬರೆಯಿರಿ.**




**ಕೃತಿ 3) I. ಮಗುವಿನ ಪ್ರೇಮವು ತಾಯಿಯ ಯಾವ ಯಾವ ಮಾತುಗಳಲ್ಲಿ ವ್ಯಕ್ತವಾಗಿವೆ ಬರೆಯಿರಿ.**

1) ..........................................................................................................................

2) ..........................................................................................................................

3) ..........................................................................................................................

4) ..........................................................................................................................

**II. ''ತಾಯಿಯೇ ದೇವರು'' ಈ ಹೇಳಿಕೆಯನ್ನು ನಿಮ್ಮ ಮಾತುಗಳಲ್ಲಿ 8 ರಿಂದ 10 ವಾಕ್ಯಗಳಲ್ಲಿ ಸ್ಪಷ್ಟ ಪಡಿಸಿರಿ.**

**III.**

1) ಜನಕ ರಾಜನ ಮಗಳು ಜಾನಕಿಯಾದರೆ

2) ದ್ರುಪದ ರಾಜನ ಮಗಳು ..........................................

3) ಕುಂತಲ ರಾಜನ ಮಗಳು ..........................................

4) ಗಾಂಧಾರ ರಾಜನ ಮಗಳು ..........................................

ಕೃತಿ 4) I. ಕೆಳಗೆ ಕೊಟ್ಟಿರುವ ಶಬ್ದಗಳನ್ನು ಗ್ರಾಂಥಿಕ ರೂಪದಲ್ಲಿ ಬರೆಯಿರಿ.

ಕೂಸು, ಮಾಸೀದ, ಹುಡಿಯಾಡಿ, ತೂಗ್ಯಾಳೂ, ಕಳದಾಳ ಮರಗ್ಯಾಳ

II. ಕೆಳಗಿನ ಶಬ್ದಗಳಿಗೆ ತತ್ಸಮ ತದ್ಭವ ಬರೆಯಿರಿ.

ರೂಪ, ವರುಷ, ಕಬ್ಬ, ಬ್ರಹ್ಮ

III. ಉಪಸರ್ಗಯುಕ್ತ ಪದಗಳನ್ನು ಬರೆಯಿರಿ

ಯೋಗ, ಬಲ, ಲೋಕ

IV. ಕೆಳಗಿನ ವಾಕ್ಯದ ಪ್ರಯೋಗ ಬರೆಯಿರಿ

ಲವಕುಶರು, ಕುದುರೆಯನ್ನು ಕಟ್ಟಿದರು.

ಕೃತಿ 5) I. ನಿಮ್ಮ ಶಾಲೆಯಲ್ಲಿ ಏರ್ಪಡಿಸಿದ ಭಾಷಣ ಸ್ಪರ್ಧೆಯಲ್ಲಿ ನೀವು ವಿಜೇತರಾದ ಬಗ್ಗೆ ನಿಮ್ಮ ತಾಯಿಗೆ ಒಂದು ಪತ್ರ ಬರೆಯಿರಿ.

II. ನಿನಗೆ ಗೊತ್ತಿರುವ ಯಾವುದಾದರೂ ಎರಡು ಜಾನಪದ ತ್ರಿಪದಿಗಳನ್ನು ಬರೆಯಿರಿ.

***

8QD3SY